ದಿನಾಂಕ 04.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ 1,2 ಮತ್ತು 5ರ ಪರ ವಕೀಲರಾದ ಶ್ರೀ ಸಿ.ಎಸ್.ಎಂ. ರವರಿಂದಃ-**

ನಾನು ಮತ್ತು ನನ್ನ ಸಹೋದರರು ದಾವಾ ಸ್ವತ್ತುಗಳಲ್ಲಿ ಭಾಗಂಶ ಕೋರಿ ದಾವೆಯನ್ನು ಹೂಡಿರುತ್ತೇವೆ. ಪ್ರತಿವಾದಿ 6 ಮತ್ತು 7 ನನ್ನ ಸಹೋದರರು. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಸೇರಿದ ಬೇರೆ ಸ್ವತ್ತುಗಳು ಇರುವುದಿಲ್ಲ. ನಾವು ಪುಳುವಂಗಡ ಕುಟುಂಬಕ್ಕೆ ಸೇರಿದವರು. ದಿಃ 12.02.1968 ರಂದು ನನ್ನ ತಂದೆ, ಪ್ರತಿವಾದಿ 6 ಮತ್ತು 7 ರವರು ಸರ್ವೆ ನಂ. 150 ರಲ್ಲಿ 5 ಎಕರೆ ಜಮೀನನ್ನು ಪ್ರತಿವಾದಿ 2 ರಿಂದ 4 ರವರ ತಂದೆಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಂತೆ ಜಮೀನಿನ ಸ್ವಾಧೀನವನ್ನು ಸಹ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ ಪ್ರತಿವಾದಿ 6 ಮತ್ತು 7 ರವರು ದಿಃ 12.02.1968 ರ ಕ್ರಯಪತ್ರವನ್ನು ಅಸಲು ದಾವಾ ಸಂಖ್ಯೆ 38/1977 ರ ದಾವೆಯಲ್ಲಿ ಪ್ರಶ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ 2 ರಿಂದ 4 ರವರ ತಂದೆಗೆ ಮಾರಾಟ ಮಾಡಿದ್ದ 5 ಎಕರೆ ಜಮೀನನ್ನು ಅವರಿಗೆ ಆದೇಶಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಬಗ್ಗೆ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆಯ ಡಿಕ್ರಿಯ ಜಾರಿಗಾಗಿ ನಾನು, ನನ್ನ ತಂದೆ ಹಾಗೂ ಪ್ರತಿವಾದಿ 6 ಮತ್ತು 7 ರವರು ಅಮಲ್ಜಾರಿ ಸಂಖ್ಯೆ 67/1979 ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ರಾಜಿಯಾದ ವಿಚಾರ ನನಗೆ ಗೊತ್ತಿಲ್ಲ. ಸದರಿ ರಾಜಿಯ ಪ್ರಕಾರ ನನ್ನ ತಂದೆ ರೂ. 6,000/- ಹಣ ಹಾಗೂ ಒಂದು ಎಕರೆ ಜಾಗವನ್ನು ಪಡೆದುಕೊಂಡು ಉಳಿದ ಜಾಗವನ್ನು

ಪ್ರತಿವಾದಿ 2 ರಿಂದ 4 ರವರ ತಂದೆಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 15.05.1968 ರಂದು ಸದರಿ ಒಂದು ಎಕರೆ ಜಮೀನನ್ನು ನನ್ನ ತಂದೆ ಪೂವಯ್ಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮಗೆ ಸರ್ವೆ ನಂ. 150 ರಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 150 ರ ಜಮೀನಿನ ಉತ್ತರಭಾಗದಲ್ಲಿ ರಸ್ತೆಯ ಇದೆ ಎಂದರೆ ಸರಿ. ಪ್ರತಿವಾದಿ 2 ರಿಂದ 5 ರವರು ದಿಃ 15.05.1985 ರಂದು ನೋಂದಾಯಿತ ಕ್ರಯಪತ್ರದ ಮೂಲಕ ದಾವಾ ಸ್ವತ್ತನ್ನು ಒಂದನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರದಂತೆ ಒಂದನೇ ಪ್ರತಿವಾದಿಯು ದಾವಾ ಸ್ವತ್ತಿನ ಸ್ವಾ ಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಈಗ ಕಾಫಿ, ಮೆಣಸು ಮತ್ತು ತೆಂಗಿನ ಮರಗಳು ಹಾಗೂ ಕಾರ್ಮಿಕರ ವಸತಿ ಕೊಠಡಿಗಳು ಇವೆ ಎಂದರೆ ಸರಿ. ದಾವಾ ಸ್ವತ್ತಿನ ಕಂದಾಯ ದಾಖಲೆಗಳು ಈಗ ಒಂದನೇ ಪ್ರತಿವಾದಿಯ ಹೆಸರಿನಲ್ಲಿ ಇವೆ. ನನ್ನ ತಂದೆಯಿಂದ ಒಂದು ಎಕರೆ ಜಮೀನನ್ನು ಖರೀದಿಸಿದ ಪೂವಯ್ಯರವರು ಸ್ವಾ ಮಿರವರಿಗೆ ಸದರಿ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿಯ ಬಳಿಕ ಸರ್ವೆ ನಂ. 150/1 ಮತ್ತು 150/2 ಆಗಿ ಪೋಡಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಿಃ 16.06.2004 ರಂದು ಸ್ವಾ ಮಿರವರು ಒಂದು ಎಕರೆ ಜಮೀನನ್ನು ಪೊನ್ನಂಪೇಟೆ ಕೊಡವ ಸಮಾಜಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಒಂದು ಎಕರೆ ಜಮೀನಿನಲ್ಲಿ ಈಗ ಅಪ್ಪಚ್ಚು ಕವಿ, ವಿದ್ಯಾಲಯ ಇದೆ ಎಂದರೆ ಸರಿ. ನನ್ನ ತಂದೆ, ಪ್ರತಿವಾದಿ 6 ಮತ್ತು 7 ರವರು ದಾವಾ ಸ್ವತ್ತನ್ನು ಈ ಹಿಂದೆಯೇ ಮಾರಾಟ ಮಾಡಿದ ವಿಚಾರ ನಮಗೆ ಗೊತ್ತಿದ್ದರೂ ಸಹ ಪ್ರತಿವಾದಿ 1 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು

ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ದಾವಾ ಸ್ವತ್ತಿನಲ್ಲಿ ಯಾವುದೇ ರೀತಿಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಸಹಿಃ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

(ಸಾಕ್ಷಿದಾರರ ಸಹಿ)